# ಬರೆಯುವ ಮುನ್ನ . . . . . .

ಧನ್ಯವಾದಗಳು ಹಾಗೂ ಕ್ಷಮೆ ಇರಲಿ! ಇದೇನಪ್ಪಾ? ಏನನ್ನೂ ಗೀಚದೇ ಒಮ್ಮಿಂದೊಮ್ಮೆಲೇ ಹೀಗೆ ಧನ್ಯವಾದ ಹಾಗೂ ಕ್ಷಮೆ ಎರಡನ್ನೂ ಒಟ್ಟಿಗೆ ಕಟ್ಟಿಟ್ಟಿದ್ದಾರಲ್ಲ?! ಎಂದುಕೊಳ್ಳುತ್ತಿದ್ದೀರಲ್ಲಾ? ಹೌದು . ಮೊದಲನೆಯದು, ಈ ಪುಟ್ಟ ಮನಸ್ಸಿನ ದಿಟ್ಟ ನಿಲುವಿಗೆ ತಮ್ಮ ಒಂದಿಷ್ಟು ಕಾಲ ವಿನಿಯೋಗಿಸುತ್ತಿರುವುದಕ್ಕೆ ; ಎರಡನೆಯದು , ಈ ಹುಚ್ಚು ಹುಡುಗನ ಮಾತು ನಿಮ್ಮ ಮೆಚ್ಚಿನ ಭಾವನೆಗಳಿಗೆ ಚುಚ್ಚುವಂತದಿದ್ದಲ್ಲಿ!

ಈ ಜಗತ್ತಿನ ಪ್ರತಿ ವ್ಯಕ್ತಿ / ಜೀವಿಗೂ ತನ್ನದೇ ಆದ ರೀತಿಯಲ್ಲಿ ಬದುಕು ನಡೆಸುವ ಹಕ್ಕಿದೆ. ಆದರೆ ಆ ರೀತಿಗೂ ಒಂದು ನೀತಿ–ರೀತಿಯಿದೆ. ಇದೇನಿದು, ಕೃಷ್ಣನಿಗೆ ಗರ್ಲ್‌ಫ್ರೆಂಡಾ? ಎಂಬಂತೆ ರೀತಿಗೆ ನೀತಿ–ರೀತಿನಾ ಎಂದುಕೊಳ್ಳಬೇಡಿ. ನಮ್ಮ ಬದುಕಿನ ದಾರಿಯಲ್ಲಿ ಯಾರೊಬ್ಬರಿಗೂ ತೊಂದರೆ ನೀಡುವ ಅಧಿಕಾರ ನಮಗಿಲ್ಲ. Rights and Rules ಬಗ್ಗೆ ಮಾತನಾಡುವಂತೆ Duties ಕುರಿತೂ ಯೋಚನೆ ಮಾಡಬೇಕಾಗಿದೆ ಇಂದು ನಾವು. ಒಂದು ಮಾತಿದೆ " Help Ever ; Hurt Never". ಆದರೆ ನನ್ನ ಪ್ರಕಾರ "Help If Possible ; But Never Hurt Anyone" . ಈ ಭೂಮಿ–ಆಕಾಶ–ಗಾಳಿ–ನೀರು ಹೇಗೆ ಯಾರೊಬ್ಬರ ಸ್ವತ್ತೂ ಅಲ್ಲವೋ , ಹಾಗೆ ಅವರವರ ಜೀವನ, ಅದರ ಶೈಲಿ ಅವರದು. ಅದನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇಲ್ಲ ! With a condition , that style of living must and should not cause harm to others. ನಮ್ಮ ಆಹಾರ–ವಿಹಾರ–ವಿಚಾರ ಎಂದೆಂದಿಗೂ ನಮ್ಮ ಸ್ವಂತ. ಆದರೆ ಸದು ಸಮಾಜಮುಖಿಯಾಗಿರಬೇಕು.

ಈ ಮಾನವಜನ್ಮ ನಮಗೆ ದೊರೆತಿರುವುದು ಒಂದು ಭಾಗ್ಯ. ಈ ಸೃಷ್ಟಿಯಲ್ಲಿನ ಯಾವೊಬ್ಬ ಜೀವಿಗೂ ಇರದ , ಭಾವನೆಗಳನ್ನು ವ್ಯಕ್ತಪಡಿಸುವ ಅವಕಾಶ ಇರುವುದು ನಮಗೆ ಮಾತ್ರ. ಹೀಗಾಗಿಯೇ ದಾಸರು ಹೇಳಿದ್ದಾರೆ " ಮಾನವ ಜನ್ಮ ದೊಡ್ಡದು ; ಇದ ಹಾಳು ಮಾಡಿಕೊಳ್ಳದಿರಿ ಹುಚ್ಚಪ್ಪಗಳಿರಾ " ಎಂದು. ಗೊತ್ತಿಲ್ಲ! ಯೋಚಿಸುವುದೂ ಇಲ್ಲ ಕೂಡಾ, ನಾನು ಮುಂದಿನ ಜನ್ಮದ ಬಗ್ಗೆ! ನನ್ನ ಕೈಲಾದದ್ದನ್ನು ಮಾಡುತ್ತಾ , ಯಾರೊಬ್ಬರಿಗೂ ತೊಂದರೆಯಾಗದಂತೆ ಮನಸ್ಸು ಒಪ್ಪುವ ರೀತಿ ಬದುಕು ನಡೆಸುವುದು ನನ್ನ Policy. ಒಂದಂತೂ ನೆನಪಿರಲಿ , " ಒತ್ತಾಯದಿಂದ ಗೆದ್ದದ್ದು ಕ್ಷಣಿಕ ; ಪ್ರೀತಿಯಿಂದ ಗೆದ್ದದ್ದು ಅಮರ". ಈ Life ಅನ್ನುವುದೇನಿದೆ , ಅದು ಕನ್ನಡಿ ಇದ್ದಂತೆ , ನಾವು ಹೇಗೋ ; ಹಾಗೆ ಅದು.

ಈಗಾಗಲೇ ಹೇಳಿದ ಬದುಕು – ಪ್ರೀತಿ – ಮನಸು ಇವೆಲ್ಲದರ ಬಗ್ಗೆ ನಾನೀಗಲೆ ಬರೆದರೆ, "ಬರೆಯುವ ಮುನ್ನ . ." ಎಂಬ ಶೀರ್ಷಿಕೆಗೆ ಬರೆ ಎಳೆದಂತಾದೀತು. ದಿನಕ್ಕೊಂದು , ಇಲ್ಲವಾದಲ್ಲಿ ವಾರಕ್ಕೊಂದಾದರೂ ಒಂದು ವಸ್ತು/ವ್ಯಕ್ತಿ/ವಿಷಯದ ಮೇಲೆ ಒಂದಿಷ್ಟು ಬರೆದು ತಮ್ಮ ಮುಂದೆ ಸಾದರಪಡಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದಿದ್ದೇನೆ. ನನ್ನ ಬರವಣಿಗೆ ನನ್ನ ಭಾವನೆಗಳು, ನನ್ನ ಜೀವನದಲ್ಲಿ ಘಟಿಸಿದ ಘಟನೆಗಳು ಹಾಗೂ

Krishnamurthy Nayak

© 2006 Copy Rights : Krishnamurthy Nayak, All Rights Reserved

e-mail : thatzkrish@gmail.com

ಬದುಕಿನೆಡೆಗೆ ಇರುವ ನನ್ನ ಸ್ವಂತ ಅಭಿಪ್ರಾಯಗಳ ಸಮ್ಮಿಶ್ರಣವಾಗಿದ್ದು , ಯಾರೊಬ್ಬರ ಆಚಾರ / ವಿಚಾರಗಳ ಗೇಲಿ ಮಾಡುವ ವೇದಿಕೆಯಲ್ಲ ಎಂದು ತಿಳಿಯಪಡಿಸುತ್ತೇನೆ. ನನ್ನ ವಿಷಯಮಂಡನೆ ತಮ್ಮ ಮನಸ್ಸಿಗೆ ಹತ್ತಿರವಾಗಿದ್ದು , ತಮಗೆ ಇಷ್ಟವಾದಲ್ಲಿ ಆ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ನನಗೆ ಕಳಿಸಿದಲ್ಲಿ , ನನ್ನ ಪ್ರಯತ್ನಕ್ಕೆ ನೀರೆರೆದು ಪೋಷಿಸಿದಂತಾಗುತ್ತದೆ. Mistakes happen by Mistake. ಯಾವುದೇ ತಪ್ಪು / ದೋಷಗಳನ್ನು ನನ್ನ ಗಮನಕ್ಕೆ ತಂದು , ನನಗೆ ತಿದ್ದಿಕೊಳ್ಳಲು ಅವಕಾಶ ನೀಡಿದಲ್ಲಿ ಎಂದೆಂದಿಗೂ ನಿಮಗೆ ಚಿರಋಣಿ.

**ನಿಮ್ಮವನು**
**ಕೃಷ್ಣಮೂರ್ತಿ ನಾಯಕ**

Krishnamurthy Nayak

© 2006 *Copy Rights : Krishnamurthy Nayak, All Rights Reserved*
*e-mail : thatzkrish@gmail.com*

# ಬದುಕು An Endless Journey

ಬದುಕು ಎಂದರೇನು? ಬರಿ ದಿನ ನೂಕುವುದಾ? ಬಂದ ಕಷ್ಟಕ್ಕೆ ಹೆದರಿ ಬಾರದ ಸುಖದ ದಾರಿ ಕಾಯುವುದಾ? ಅಥವಾ ಇನ್ನೇನೋ? ಒಮ್ಮೆ ಪ್ರಯತ್ನಿಸಿ ನೋಡಿ. ಏಕಾಂತದಲ್ಲಿ ಒಮ್ಮೆ ಮನಸು ಬರಿದು ಮಾಡಿಕೊಂಡು , ನಿಮ್ಮ ಜೀವನ–ಕಳೆದ ದಿನಗಳು –ಬರಲಿರುವ ದಿನಗಳು ಇವುಗಳ ಬಗ್ಗೆ ಒಂದಿಷ್ಟು ಹೊತ್ತು ಯೋಚಿಸಿ. ಏನನ್ನಿಸುತ್ತಿದೆ ಈಗ? ಕೆಲವರೆನ್ನಬಹುದು ಖುಷಿಯಾಗುತ್ತಿದೆ ಎಂದು. ಇನ್ನ ಕೆಲವರು ಬೇಸರವಾಗುತ್ತಿದೆಯೆಂದು ; ಉಳಿದವರು ನಿರುತ್ತರ. ಮೊದಲನೆಯ Categoryಯವರು ಬಹಳ ವಿರಳ (rare). ಎರಡನೆಯ Categoryಯವರು ಸರಿ–ಸಮ. ಇದ್ಯಾವುದೂ Categoryಗೆ ಸೇರದವನು ನಾನು! ಕಳೆದುದರ ಬಗ್ಗೆ ಬೇಸರ ; ಪಡೆದುದರ ಬಗ್ಗೆ ಖುಷಿ ; ಇರುವುದರ ಬಗ್ಗೆ ನಿರ್ಲಿಪ್ತ ಮನೋಭಾವನೆ ನನ್ನದು. ನಿಜ! ಈಗ ನೀವು ನಾನಾಗುತ್ತಿದ್ದಿರಾ. ನನ್ನ Categoryಯಲ್ಲಿದ್ದಿರಾ. ಇದು ಮನುಷ್ಯನ ಸಹಜಗುಣ. ಯಾವುದು ವಾಸ್ತವವೋ (Reality) ಅದರೊಂದಿಗೆ ತಾಳೆ ಮಾಡಿದಾಗ ನಾವೂ ಅದರಲ್ಲೊಂದಾಗುತ್ತೇವೆ. ಈಗ ನಾವೆಲ್ಲರೂ ಒಂದೇ Categoryಯವರು. ಅಂದರೆ " ಕಳೆದುದರ ಬೇಸರ ; ಪಡೆದುದರ ಖುಷಿ ; ಇರುವುದ ಒಪ್ಪಿಕೊಳ್ಳದ ಮನಸ್ಥಿತಿ " ಉಳ್ಳವರು ನಾವು.

ಬದುಕಿನ ಬಗ್ಗೆ ಬರೆಯಬೇಕೆಂದರೆ , ಜನ್ಮ ಕೊಟ್ಟ ಹೆತ್ತವರ ಬಗ್ಗೆ , ಬಣ್ಣದ ಬದುಕಿಗೆ ಹೆಗಲು ಕೊಟ್ಟ ಗೆಳೆಯ–ಗೆಳತಿಯರ ಬಗ್ಗೆ , ಸೋತು ಗೆದ್ದ ಬಗ್ಗೆ , ಗೆದ್ದು ಸೋತ ಬಗ್ಗೆ , ಕೊಟ್ಟ ಬಗ್ಗೆ, ಬಿಟ್ಟ ಬಗ್ಗೆ , ಇಟ್ಟ ಬಗ್ಗೆ , ಇನ್ನೂ ನೆನಪಾಗದಿರುವ ಬಗ್ಗೆ ಬರೆಯಬೇಕು. ಆದರೂ ಎನೋ miss ಆಗುತ್ತಿದೆ ಎನ್ನಿಸುತ್ತಿಲ್ಲವಾ? ಹ್ಞೂಂ! ನನ್ನ ಬಗ್ಗೆ ಹಾಗೂ ನಿಮ್ಮ ಬಗ್ಗೆ! ತಮಾಷೆಯೆಂದರೆ ಇಷ್ಟೆಲ್ಲ ಬರೆದ ಮೇಲೂ ಇನ್ನೂ ಎನೋ ಉಳಿದುಕೊಂಡುಬಿಟ್ಟಿರುತ್ತದೆ. ಅದೇ ಬದುಕು!!! What a simple and easy definition of life. Isn't it?

ಬದುಕು ಒಂದು ಸಾಧನೆಯ ವೇದಿಕೆ. Our life is an opportunity to achieve something. ನಿಜ! ಎಲ್ಲ ಸಾಧಿಸಿದ ಮೇಲೂ, ಮನಸ್ಸಿನ ಮೂಲೆಯಲ್ಲೊಂದು ಕೊರಗಿನ ಕನವರಿಕೆಯಿರುತ್ತದೆ. ಕಡೆಗೆ ಅಂದುಕೊಳ್ಳುವುದು, ಅನ್ನಿಸುವುದು ಮಾತ್ರ ಇಷ್ಟೇ " ಕಳೆದುಕೊಳ್ಳಲು ನಾವು ತಂದದ್ದಾದರೂ ಏನು ? ನಿನ್ನೆ ಯಾರದ್ದೋ ಆಗಿದ್ದು ಇಂದು ನಮ್ಮದಾಗಿದೆ " and so on..... .. .. That is ಗೀತಸಾರ. ಆದರೆ ಬದುಕಿನ ಬಗೆಗೊಂದು positive attitude ಬೆಳೆಸಿಕೊಂಡವರು ಯೋಚಿಸುವ ರೀತಿ ಅಲ್ಲ ಇದು. ಬದುಕಲು ಎರಡು ರೀತಿಯಿರುತ್ತದೆ. ಒಂದು , ಬದುಕನ್ನು ಇದ್ದಂತೆ ಸ್ವೀಕರಿಸಿ ಸಾಗುವುದು. ಎರಡನೆಯದು, ನಮಗೆ ಹೇಗೆ ಬೇಕೋ ಹಾಗೆ ಬದುಕನ್ನು ಬದಲಿಸಿಕೊಂಡು ಹೋಗುವುದು (What I

Krishnamurthy Nayak

© 2006 Copy Rights : Krishnamurthy Nayak, All Rights Reserved

e-mail : thatzkrish@gmail.com

mean is to change the way we look about the life ). ಮೊದಲನೆಯದು ಬಹಳ ಸುಲಭ ಮತ್ತು no risk. ಆದರೆ ಎರಡನೆಯದು ತುಂಬಾನೇ risky ಮತ್ತು ಹಾದಿ ಬಹಳ ತ್ರಾಸದಾಯಕ ( very difficult but POSSIBLE). ಒಂದಂತೂ ಸತ್ಯ. Everything depends on how you take matter. ಉದಾಹರಣೆಗೆ, ನಾವು ದಾರಿಯಲ್ಲಿ ಹೋಗುತ್ತಿರುತ್ತೇವೆ ಹಾಗೂ ಯಾವುದೋ ಒಬ್ಬ ಹಳೆಯ ಗೆಳತಿ ಸಿಗುತ್ತಾಳೆ. ನಾವು ಒಂದು ಮುಗುಳ್ನಗೆ ನಕ್ಕು ಹೋಗಬಹುದು, ಇಲ್ಲ ಮುಖ ಸಿಂಡರಿಸಿಕೊಂಡು. ನಮ್ಮ ಇವೆರಡರಿಂದಲೂ ಆಕೆಗೆ ಯಾವುದೇ ಲಾಭ / ನಷ್ಟ ಇಲ್ಲ . ಆದರೆ ನಮ್ಮ ಒಂದು ವ್ಯಕ್ತಿತ್ವ ಅಥವಾ image ಸೃಷ್ಟಿಯಾಗುವುದೇ ಅಲ್ಲಿ. ಬದುಕು ಎನ್ನುವುದು ಒಂದು ವ್ಯಕ್ತಿತ್ವ ವಿಕಸನಕ್ಕೆ ನಾಂದಿ ಹಾಡುವ ಪಾಠಶಾಲೆಯಿದ್ದಂತೆ. ನಾವು – ನಮ್ಮತನ ಎಂಬ ಒಂದು Real Image ಇರಬೇಕು. ಆಗ ಬದುಕಿನೆಡೆಗೊಂದು ಸಾರ್ಥಕ ಮನೋಭಾವ ಮೂಡುತ್ತದೆ. ಮನಸ್ಸು ಬದುಕನ್ನು ಬದುಕಿಸಿ, ಬದಲಿಸಿ ಸಮೃದ್ಧಿಯೆಡೆಗೆ ಬೆಳೆಸುತ್ತದೆ.

ಈ ಜೀವನ ಎಂಬುದು ಬೇಕು–ಬೇಡಗಳ ನಡುವಿನ ಪಯಣ. ಈ ಬೇಕು–ಬೇಡಗಳನ್ನು ಸರಿಯಾಗಿ ನಿರ್ವಹಿಸಿಕೊಂಡು ಹೋಗುವುದಿದೆಯಲ್ಲ ಅದೇ ಬಹಳ ಕಷ್ಟ. To gain something, we have to loose something. ಆದರೆ ಪಡೆದು ಕಳೆಯುವ ಅಥವಾ ಕಳೆದು ಪಡೆಯುವ ಲೆಕ್ಕ ಕರಾರುವಕ್ಕಾಗಿರಬೇಕು. ಒಂದು ಪಡೆದ ಮೇಲೆ ಅದಕ್ಕೋಸ್ಕರ ಕಳೆದುದರ ಬಗ್ಗೆ ಬೇಸರವಿರಬಾರದು. ನಮ್ಮ software language ನಲ್ಲಿ ಹೇಳಬೇಕೆಂದರೆ Decision Making System ಸರಿಯಿರಬೇಕು. ಒಂದಂತೂ ಎಚ್ಚರವಿರಲಿ, ನಮ್ಮ ಒಂದು ತೀರ್ಮಾನ ನಮ್ಮ ಬದುಕಿನ ಗತಿಯನ್ನೇ ಬದಲಿಸಿಬಿಡಬಲ್ಲದು.

ಒಬ್ಬ ತತ್ವಜ್ಞಾನಿ (Philosopher) ಹೇಳುತ್ತಾನೆ " The world is facing mainly 3 problems and they are 3 P's. * Poverty * Population * Pollution. ಅದರಂತೆ ನನ್ನ ಪ್ರಕಾರ ಒಬ್ಬ ವ್ಯಕ್ತಿ ಧಾರಾಳವಾಗಿ ನೀಡಬಹುದಾಗಿದ್ದು ಕೇವಲ ೩ "ಉ"ಗಳು. * ಉಪದೇಶ * ಉಪಟಳ * ಉಪಾಯ. ಕೆಲವರಿಗೆ ನನ್ನ ಮಾತು ಮೊದಲೆರಡರ ಪರಿಚಯ ಮಾಡಿಸಿದೆಯೇನೋ? ಗೊತ್ತಿಲ್ಲ. ಹಾಗಿದ್ದಲ್ಲಿ ಒಂದು ಉಪಾಯ ಹೇಳ್ತೇನೆ!!!!!!!! ಅಲ್ಲಿಗೆ ಮೂರನ್ನು ಪುಕ್ಕಟೆ (free of cost) ಕೊಟ್ಟಂತಾಗುತ್ತದೆ. Remember once again, everything depends on how you take matter. ದುಡ್ಡು ಕೊಟ್ಟು ಬದುಕುವ ಕಲೆ (Art of Living) ಕಲಿಯುತ್ತಿರೋ ಈ ಕಾಲದಲ್ಲಿ ಪುಕ್ಕಟೆಯಾಗಿ ಬಂದದ್ದನ್ನು ಯಾರೂ ಅಷ್ಟೊಂದು ಆಸಕ್ತಿ ವಹಿಸಿ ಕೇಳಿಸಿಕೊಳ್ಳುವುದಿಲ್ಲ. ಅದೇನೇ ಇರಲಿ. ಅನುಕರಣೆ (Imitation) ಗೂ ಹಾಗೂ ಅನುಸರಣೆ (Following) ಗೂ ಅಜಗಜಾಂತರ ವ್ಯತ್ಯಾಸ. ಅನುಸರಣೆ ಪ್ರಯೋಜನಕಾರಿ, ಅನುಸರಿಸಿ. ಅವಸರದಲ್ಲೂ ಅನುಸರಣೆಯ ಅನುಕರಿಸಿ ವ್ಯವಹರಿಸುವ ಧೋರಣೆ ಒಳ್ಳೆಯದಲ್ಲ.

ಬದುಕಿನ ಮೂಲ ಉದ್ದೇಶ ಸಾರ್ಥಕತೆ. ಉದ್ಯಾನದಲ್ಲಿ ಬೆಳೆದ ಹೂವು ಹೇಗೆ ದೇವರ ಮುಡಿಯೇರಿ ಸಾರ್ಥಕವೆನಿಸಿಕೊಳ್ಳುತ್ತದೋ, ಹಾಗೆ ನಮ್ಮ Destinyಯನ್ನು ನಾವು

© 2006 Copy Rights : Krishnamurthy Nayak, All Rights Reserved

e-mail : thatzkrish@gmail.com
Krishnamurthy Nayak

ಗುರುತಿಸಿ, ಅದಕ್ಕೆ ನಮ್ಮ ವ್ಯಕ್ತಿತ್ವದಲ್ಲೇ ಗುರುತರ (Intense) ಬದಲಾವಣೆ ಮಾಡಿಕೊಂಡು ಅದರೆಡೆಗೆ ಸಾಗಿ ಸಾಧಿಸಿದಲ್ಲಿ ಅದೇ ಬದುಕಿನ ಸಾರ್ಥಕತೆ. ಕಷ್ಟಪಟ್ಟು ದುಡಿದು ಮಗನಿಗೆ ಇಂಜೀನಿಯರಿಂಗ್ ಓದಿಸಿದ ಹೆತ್ತವರ ಪ್ರಯತ್ನ ಸಾರ್ಥಕವಾಗುವುದು , ಆತ ಒಳ್ಳೆಯ ವಿದ್ಯೆ ಪಡೆದು ಉತ್ತಮ ಕೆಲಸ ಪಡೆದುಕೊಂಡಾಗ. ಒಬ್ಬ ಪ್ರೇಮಿಯ ಹೋರಾಟ ಸಾರ್ಥಕತೆ ಪಡೆಯುವುದು , ಆತನ ಪ್ರೀತಿಯ ನಿಸ್ವಾರ್ಥತೆ ಆತನ ಪ್ರೇಯಸಿಗೆ ಮನವರಿಕೆಯಾದಾಗ. ಶಿಲೆಯಲ್ಲಿ ಕಲೆ ಅರಳವುದು , ಶಿಲೆಗೆ ಹಾಗೂ ಕಲೆಯಾಗಲು ನೆಲೆ ಕಲ್ಪಿಸಿದ ಶಿಲ್ಪಿಯ ಅಂತರಂಗದ ಒರತೆಗೆ ಸಾರ್ಥಕತೆ ದೊರೆತಂತೆ.ಕೇಳಬಹುದು ನೀವು. ಈ ಸಾರ್ಥಕತೆಯ ಪರಿಧಿ (Limit) ಯಾವುದು ಎಂದು. ಉತ್ತರ ಸಾರ್ಥಕತೆ!!!!!!!! ಈ ಸಾಧನೆಯೇನಿದೆ ಅದು ನಿಂತ ನೀರಲ್ಲ ; ನಿರಂತರ ಚಲನೆಯದು. ಒಂದು ವರ್ಷ ನಾನು ಸಂಗೀತ ಸ್ಪರ್ಧೆಯಲ್ಲಿ award ಪಡೆದರೆ , ಆ ವರ್ಷದ ಸಾಧನೆ ನನ್ನದು. ಕೇವಲ ನನ್ನದು. ಅದು ಆ ವರ್ಷ ನಾ ಪಟ್ಟ ಶ್ರಮದ ಸಾರ್ಥಕತೆ. ಮುಂದಿನ ವರ್ಷ ಆ ಸಾರ್ಥಕತೆ ಯಾವ ಶ್ರಮಕ್ಕೂ ಸಿಗಬಹುದು, ನನ್ನನ್ನೂ ಸೇರಿಸಿ. ಮನುಷ್ಯ ಏನಾದರೂ ಸಾಧಿಸಬೇಕೆಂದಿದ್ದರೆ , ಆತ ಮೊದಲು ಕನಸು ಕಾಣಬೇಕು. ಕನಸಿನ ಗೂಡಿನಲ್ಲಿ ಗುರಿ ಎಂಬ ಮೊಟ್ಟೆ ಇಟ್ಟು , ಶ್ರಮದಿಂದ ಕಾವು ಕೊಟ್ಟು ಸಾರ್ಥಕತೆಯೆಂಬ ಮರಿಜೀವದ ಹುಟ್ಟಿಗೆ ನಾಂದಿ ಹಾಡಬೇಕು. ಅಷ್ಟೇ ಅಲ್ಲ. ನಮ್ಮ ಮನಸು ಕನಸುಗಳ ಬಲೆಯಾಗಬೇಕು. ಆ ಬಲೆ ಇನ್ನಷ್ಟು ಮನಸುಗಳಲ್ಲಿ ಕನಸು ತುಂಬಿಸಲು ನೆಲೆಯಾಗಬೇಕು. ನೆಮ್ಮದಿಯ ಸಂತೃಪ್ತ ಜೀವನ ಎಲ್ಲರದಾಗಬೇಕು. ಆಗ ಬದುಕು ಸುಂದರ ಮತ್ತು ಸುಖಮಯ. ಆ ಬದುಕು ಎಲ್ಲರದಾಗಲಿ. ಆ ದಿಶೆಯಲ್ಲಿ ನಮ್ಮ ಹೋರಾಟ ಸಾಗಲಿ. All The Best.

**ನಿಮ್ಮವನು**
**ಕೃಷ್ಣಮೂರ್ತಿ ನಾಯಕ**

Krishnamurthy Nayak

© 2006 *Copy Rights : Krishnamurthy Nayak, All Rights Reserved*
*e-mail : thatzkrish@gmail.com*

# ಪ್ರೀತಿ My Heart Beat . . . . . .

ಪ್ರೀತಿ! . . . . . Love! . . . . . ಪ್ಯಾರ್!. . . . . ಕ್ಷಮಿಸಿ, ಮೊದಲನೆಯ ಸಾಲಿನಲ್ಲಿ "ಪ್ರೀತಿ" ಎಂಬ ಶಬ್ದದೊಂದಿಗೆ ಬರೆಯಲು ಅರ್ಹ ಪದ ನನಗೆ ಸಿಗದ ಕಾರಣ ಹೀಗೆ ಬರೆದಿದ್ದೇನೆ. ನಾನೀಗ ಬರೆಯಹೊರಟಿರುವುದು ಕಣ್ಣೆದುರಿಗಿದ್ದರೂ ಕಲ್ಪನೆಗೆ ನಿಲುಕದ, ನಮ್ಮಲ್ಲಿದ್ದರೂ ನಮಗರಿವಾಗದ, ಬದುಕಿಗೆ ಅತ್ಯವಶ್ಯಕ ಹಾಗೂ ಅನಿವಾರ್ಯವಾದ, ಪರಿಚಿತವಿದ್ದೂ ಅಪರಿಚಿತವೆನಿಸುವ, ಸಿಕ್ಕಿದಷ್ಟೂ ಮತ್ತೆ ಮತ್ತೆ ಬೊಗಸೆಯೊಡ್ಡಿ ಬೇಡುವ ನಾವೆಲ್ಲರೂ ಪ್ರೀತಿಸದೆ ಪ್ರೀತಿಸುವ ಪ್ರೀತಿಯ ಬಗ್ಗೆ !!!

ಪ್ರೀತಿ ಅಂದರೆ ಒಂದಿಷ್ಟು extra ಕಾಳಜಿ; ಒಂದಿಷ್ಟು extra ಸಲುಗೆ; ಒಂದಿಷ್ಟು extra ಅಟ್ಯಾಚ್‌ಮೆಂಟ್; ಒಂದರ್ಥದಲ್ಲಿ ನಮ್ಮ ಬದುಕಿನ ಪ್ರತಿ ಕ್ಷಣದ extra innings! ನಿಜ ಹೇಳಬೇಕೆಂದರೆ, ಕೈಯಲ್ಲಿ ಪೆನ್ನು ಹಿಡಿದು ಕೂತರೆ ಕುದುರೆಯಂತೆ ಓಡಿ ಬರೆದು ಪುಟ ತುಂಬಿಸುತ್ತಿದ್ದ ನನ್ನ ಕೈಗಳು ಒಂದಿನಿತು ದೂರ ಸಾಗಿ ಸೊರಗಿ ನಿಲ್ಲುತ್ತಿವೆ, ಪ್ರೀತಿ ಬಗ್ಗೆ ಬರೆಯುವಾಗ. ಯಾಕೋ ಏನೋ? ಒಂದಿಷ್ಟು extra ಭಯ ನನಗೀಗ. ನಾ ನನ್ನ ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸುವ ಈ ಪ್ರೀತಿಯ ಬಗ್ಗೆ ತುಸು ಕಡಿಮೆ ಬರೆದರೆ ಅದು ನನಗೆ ನಾನೇ ಬಗೆದುಕೊಂಡ ಮೋಸ. ಸ್ವಲ್ಪ ಜಾಸ್ತಿಯಾದರೆ ಅಭಾಸ! ಎಲ್ಲಿಂದ ಆರಂಭಿಸಿದರೆ ಸರಿಯೆಂದು ತೋಚದಿದ್ದರೂ ನಾ ಮೊದಲು ಬರೆಯಲೇಬೇಕು ಪ್ರೀತಿಯ ವಿವಿಧ ರೀತಿಗಳ ಬಗ್ಗೆ. ಪ್ರೀತಿ ವಿಶ್ವರೂಪಿ; ವಿಶ್ವವ್ಯಾಪಿ. ಕಣ-ಕಣದಲ್ಲೂ ಕ್ಷಣ-ಕ್ಷಣದಲ್ಲೂ ಇದರ ಛಾಯೆಯಿದೆ, ಕಂಡೂ ಕಾಣದ ಮಾಯೆಯಿದೆ. ಹೆತ್ತವರ ಮೇಲಿನ ಆದರ, ಒಡಹುಟ್ಟಿದವರ ಮೇಲಿನ ಅಕ್ಕರೆ, ಗೆಳೆಯ-ಗೆಳತಿಯರೊಡಗಿನ ಸಲುಗೆ, ಹಚ್ಚಿಕೊಂಡವರೊಡಗಿನ ಆತ್ಮೀಯತೆ, ದೈವ ಸ್ವರೂಪಿ ಮಕ್ಕಳ ಮೇಲಿನ ಮಮತೆ-ವಾತ್ಸಲ್ಯ, ಹಿರಿಯರ ಮೇಲಿನ ಗೌರವ, ಕಣ್ಣಂಚಿನ ನಗುವಿನಲ್ಲಿ ಮನಸೆಳೆದ ಹುಡುಗಿಯ ಮೇಲಿನ ಹುಚ್ಚು, ಬಯಸಿದ್ದು ಪಡೆಯಲೇಬೇಕೆಂಬ ಕಿಚ್ಚು, ನನ್ನದು-ನನ್ನವರು ಎಂಬ ಮೋಹ, ಬದುಕಿಗೊಂದು ಅರ್ಥ ಹುಡುಕಿ ಸಾರ್ಥಕತೆ ಪಡೆವ ತವಕ ಇನ್ನು ಏನೇನೋ . . . !!!!!

ಸೂರ್ಯ ಹುಟ್ಟೋದು, ಕೋಳಿ ಕೂಗೋದು, ಮೊಗ್ಗು ಅರಳೋದು, ದುಂಬಿ ಜೇನ ಹೀರುವುದು, ಗಟ್ಟಿ ಮೋಡ ತುಂತುರು ಮಳೆಯಾಗಿ ಸುರಿಯೋದು, ಬಿತ್ತಿದ ಬೀಜ ಮೊಳಕೆಯೊಡೆದು ಸಸಿಯಾಗೋದು, ನಾ ನಾಲ್ಕಕ್ಷರ ಗೀಚೋದು ; ಅದು ನಿಮ್ಮೆದೆಯ ನಾಟೋದು ಇವೆಲ್ಲ ಪ್ರೀತಿಯ ಒಂದಿಷ್ಟು samples. ಯಶಸ್ಸಿನ ಮೆಟ್ಟಲು ಪ್ರಯತ್ನವಾದರೆ, ಆ ಪ್ರಯತ್ನಕ್ಕೆ ತೊಟ್ಟಿಲು ಈ ಪ್ರೀತಿ. ನಾವು ಯಾವುದಕ್ಕಾದರೂ ಪ್ರಯತ್ನಿಸುತ್ತೇವೆ ಅಂತಾದಲ್ಲಿ ಅದರ ಹಿಂದೆ ಪಡೆಯಲೇಬೇಕೆಂಬ ಮನಸ್ಸಿರುತ್ತದೆ. ಆ ಮನಸ್ಸಿನಲ್ಲಿ ತಪಸ್ಸಿರುತ್ತದೆ. ಆ ತಪಸ್ಸಿಗೆ ಹವಿಸ್ಸು ಈ ಪ್ರೀತಿ. ಈ ಹಿಂದೆಯೇ ಹೇಳಿದಂತೆ

© 2006 Copy Rights : Krishnamurthy Nayak, All Rights Reserved

e-mail : thatzkrish@gmail.com
Krishnamurthy Nayak

" ಒತ್ತಾಯದಿಂದ ಗೆದ್ದದ್ದು ಕ್ಷಣಿಕ ; ಪ್ರೀತಿಯಿಂದ ಗೆದ್ದದ್ದು ಅಮರ ". ಒಮ್ಮೆ ಪ್ರಯತ್ನಿಸಿ ನೋಡಿ. ಬೆಳಗ್ಗೆ ಎದ್ದು ಅಭ್ಯಂಜನ ಮುಗಿಸಿ ಹೊರಡುವಾಗ, ಮನದಲ್ಲೇ ಒಂದು ತೀರ್ಮಾನ ಮಾಡಿಕೊಳ್ಳಿ. ಇಂದು ನಾನು ಯಾರೊಂದಿಗೂ ಮುನಿಸಿಕೊಳ್ಳುವುದಿಲ್ಲ. ಹಾಗೇನಾದರೂ ಮಾಡಿಕೊಳ್ಳಲೇಬೇಕಾಂತಹ ಸಂದರ್ಭ ಬಂದಲ್ಲಿ, ನಕ್ಕು ಹೊರನಡೆದುಬಿಡುತ್ತೇನೆಂದು. Yes, We can! ಪ್ರತಿಯೊಂದಕ್ಕೂ ಮೂರು ಮುಖಗಳಿರುತ್ತವೆ. ಒಂದು ನನಗೆ ಸರಿ ಅನ್ನಿಸೋದು ; ಇನ್ನೊಂದು ನಿಮಗೆ ಸರಿ ಅನ್ನಿಸೋದು ; ಕೊನೆಯದು ನಿಜವಾಗಲೂ ಸರಿ ಇರೋದು. What I mean is ನಿತ್ಯಸತ್ಯ. ತಮಾಷೆಯೆಂದರೆ ಈ ನಿತ್ಯಸತ್ಯ ಅನ್ನುವುದೇನಿದೆ ಅದು ನನ್ನ ಮತ್ತು ನಿಮ್ಮ ಸತ್ಯಗಳ ಸಾಂಗತ್ಯ. ನಿತ್ಯ ನಡೆಯುವ ಈ ಸತ್ಯ-ಮಿಥ್ಯಗಳ ನಡುವಿನ ಬದುಕು ಅರ್ಧಸತ್ಯ!!!

ನಾ ಈ ಹಿಂದೆ ಬರೆದಿದ್ದೆ, " ಒಬ್ಬ ಪ್ರೇಮಿಯ ಪ್ರಯತ್ನ ಸಾರ್ಥಕವಾಗುವುದು, ಆತನ ಪ್ರೀತಿಯ ನಿಸ್ವಾರ್ಥತೆ ಆತನ ಪ್ರೇಯಸಿಗೆ ಮನವರಿಕೆಯಾದಾಗ " ಎಂದು. ಅದಕ್ಕೆ ನನ್ನ ಮಿತ್ರರೊಬ್ಬರು ಪ್ರೀತಿಯಲ್ಲಿ ಬರಿ ಸ್ವಾರ್ಥವಿದೆ, ನಿಸ್ವಾರ್ಥವಿಲ್ಲ ಎಂದು ಅಭಿಪ್ರಾಯಪಟ್ಟಿದ್ದರು. ನಿಜ! ಪ್ರೀತಿಗೆ ಹಲವು ಮುಖಗಳಿವೆ. ಅದರಲ್ಲಿ ಈ ಸ್ವಾರ್ಥವೂ ಒಂದು. ನಾ ಪ್ರೀತಿಸಿದ ಹುಡುಗಿ ನನ್ನವಳಾಗಲೇಬೇಕೆಂಬ ಹಟ, ಅವಳಿಗಾಗಿ ಹೆತ್ತು-ಹೊತ್ತು ಸಾಕಿದ ಅಮ್ಮ-ಅಪ್ಪನನ್ನು ದೂರ ಮಾಡಲು ಒಪ್ಪುವ ಮನಸ್ಥಿತಿ ಇವೆಲ್ಲ ಪ್ರೀತಿಯ ಹಿಂದಿರುವ ಸ್ವಾರ್ಥಕ್ಕೆ ಕೆಲವು ಸಣ್ಣ ಉದಾಹರಣೆಗಳು. ಆದರೆ ನಾ ಹೇಳಿದ ಈ ನಿಸ್ವಾರ್ಥತೆ ಇರುವುದು ಒಬ್ಬ ಪ್ರೇಮಿ ಹಾಗೂ ಆತನ ಪ್ರೇಯಸಿಯ ನಡುವಿರುವ ಪ್ರೀತಿಯಲ್ಲಿ. ಒಮ್ಮೆ ಯೋಚಿಸಿ. ನೀವು ನಿಮ್ಮ ಪ್ರೇಮಿ/ಪ್ರೇಯಸಿಗೆ/ಪ್ರಿಯವಾದವರಿಗೆ ಹಾಗೂ ನಿಮಗೆ ಡ್ರೆಸ್ ಖರೀದಿಸಲಿಕ್ಕೆ ಅಂತ shoppingಗೆ ಹೋಗಿರ್ತೀರಿ. ಆದರೆ ನಿಮ್ಮ ಬಳಿ ಕೇವಲ ಒಬ್ಬರ ಡ್ರೆಸ್ ಕೊಂಡುಕೊಳ್ಳಲಿಕ್ಕೆ ಆಗುವಷ್ಟು ಮಾತ್ರ ಹಣ ಇದೆ . Now your preference goes to your loved one. It must! ದೇವಸ್ಥಾನಕ್ಕೆ ಹೋದಾಗ ನಿಮ್ಮ ಪ್ರಾರ್ಥನೆಯ wish list ನಲ್ಲಿ ಅವನ/ಅವಳ/ಪ್ರೀತಿಪಾತ್ರರ ಹೆಸರೇ ಮೊದಲನೆಯದಾಗಿರುತ್ತದೆ, ಇಲ್ಲಾ ನಿಮಗಿಂತ ಮುಂಚೆ. ಈ ಸ್ವಾರ್ಥ-ನಿಸ್ವಾರ್ಥಗಳ ಹಿಂದೆ ಅಡಕವಾಗಿರೋದು ತ್ಯಾಗ. Yes! "ಸಿರ್ಫ್ ಪಾನೇ ಕಾ ನಾಮ್ ಇಷ್ಕ್ ನಹಿ ; ಕುಛ್ ಕೋನೆ ಕೋ ಭೀ ಪ್ಯಾರ್ ಕೆಹತೆ ಹೈ ". ಆದರೆ ಆ ಕಳೆದುಕೊಳ್ಳೋದೇನಿದೆ ಅದು atleast ನಿಮ್ಮ ಪ್ರೀತಿಯ survivalಗೆ ಕಾರಣವಾಗಬೇಕು. Not just for this moment, but for Lifetime.

ಹೌದು ! ಮತ್ತೆ ಬೇಕು-ಬೇಡಗಳ ಪ್ರಶ್ನೆ ಎದುರಾಗುತ್ತೆ. ಈ ಪ್ರೀತಿ ಬೇಕಾ? ಬೇಕಾದರೆ ಏನೆಲ್ಲಾ ಬಿಡಬೇಕು? ಎಷ್ಟೆಲ್ಲಾ ಬೇಡವಾಗಿಸಿಕೊಳ್ಳಬೇಕು. ಹೆತ್ತು-ಹೊತ್ತು ಸಾಕಿ ಸಲುಹಿದ ಅಪ್ಪ-ಅಮ್ಮನಿಗಿಂತ ಈ ಪ್ರೀತಿಸಿದವರು important ಆಗ್ತಾರಾ? ಹಾಗಾಗಲ್ಲ ಅಂತಿದ್ದ ಮೇಲೆ ಪ್ರೀತ್ಸಿದ್ ಯಾಕೆ? ಸರಿ! ಪ್ರೀತಿಸಿಬಿಟ್ಟಿದ್ದೇವೆ ಅನ್ನೋ ಕಾರಣಕ್ಕೆ ಮನೆ-ಮನಸ್ಸು ಒಡೆದುಹೋಗಲೇಬೇಕಾ? By chance, ಮನೆಯವರನ್ನು ಎದುರು ಹಾಕ್ಕೊಳಕ್ಕಾಗಲ್ಲಾ ಅಂತ ಹೇಳಿ, ಹೇಳದೇ ಕೇಳದೇ ಮನೆ ಬಿಟ್ಟು ಹೋದರೆ ಮನೆ ಮರ್ಯಾದೆ ಹಾಳಗಲ್ವಾ? ಆಗತ್ತಾ? ಇಷ್ಟಕ್ಕೂ Live Together Relationship ಹೆಚ್ಚಾಗಿ ನಡೆಯುತ್ತಿರೋ ಈ

© 2006 Copy Rights : Krishnamurthy Nayak, All Rights Reserved

e-mail : thatzkrish@gmail.com
Krishnamurthy Nayak

ಕಾಲದಲ್ಲಿ ಇವೆಲ್ಲಾ ಪ್ರಶ್ನೆಗಳು ನಿಜಕ್ಕೂ ಯೋಚಿಸಬೇಕಾದಂತವುಗಳಾ? ಇವೆಲ್ಲಾ common queries! ನನ್ನ queries ಕೇಳೋವಾಗ ಉಸಿರು ಸ್ವಲ್ಪ ಬಿಗಿ ಹಿಡಿದುಕೊಳ್ಳಿ. ಏನಪ್ಪಾ ಅದು ಅಂತಂದ್ರೆ ಈ ಪ್ರೀತಿ ಅನ್ನೋದು ಒಬ್ಬರ ಮೇಲೆ ಮಾತ್ರ ಮೂಡುವಂತದಾ? ಅಸಲಿಗೆ ಈ ಪ್ರೀತಿಸಿದವರು ಮದವೆಯಾಗಲೇ ಬೇಕಾ? ಮದುವೇನೇ ಪ್ರೀತಿಯ The End ಅಂತಾನಾ? ಒಂದಾನುವೇಳೆ ಪ್ರೀತಿಸಿದ ಆ ಹೃದಯಗಳು ಒಂದಾಗದೇ ಹೋಗಿ, ಬೇರೆಯಾದರೆ ಆ ಪ್ರೀತಿ ಅಲ್ಲಿಗೆ ಸಾಯುತ್ತಾ? ಅಷ್ಟಕ್ಕೂ ಈ ಪ್ರೀತಿಗೆ ಸಾವುಂಟಾ? A million dollar question!!! ನಂಗೊತ್ತುಂಟು ! ನಿಮ್ಮ ಮನಸ್ಸು ಈ ಪ್ರಶ್ನೆಗಳಿಗೆ ಉತ್ತರ ಹುಡುಕೋ ಪ್ರಯತ್ನ ಮಾಡ್ತಾ ಇದೆ ಅಂತಾ. ಕೆಲವರೆನ್ನಬಹುದು Love is Blind and Love is God. ಪ್ರೀತಿಸಿದವರನ್ನೇ ಮದುವೆಯಾಗೋದು ಸರಿ ಅಂತ. ಒಂದು ಸಣ್ಣ example ಕೊಡ್ತೇನೆ. ಒಂದು ಹುಡುಗ–ಹುಡುಗಿ ಪ್ರೀತಿಸ್ತಿರ್ತಾರೆ. ಇಬ್ಬರ ಮನೆಯಲ್ಲೂ ಅದಕ್ಕೆ ಒಪ್ಪಿಗೆ ಇರಲ್ಲಾ ಅಂತಿಟ್ಕೊಳ್ಳಿ.ಅಷ್ಟರಲ್ಲಿ ಒಂದು ವಿಷಯ ಗೊತ್ತಾಗುತ್ತೆ, ಆ ಹುಡುಗನಿಗೆ ಯಾವುದೋ ಒಂದು ವಾಸಿಯಾಗದ ಕಾಯಿಲೆ ಇದೆ. ಆತ ಬದುಕೋದು ಅಬ್ಬಬ್ಬಾ ಅಂದ್ರೆ ಆರು ತಿಂಗಳು ಮಾತ್ರ ಅಂತಾ. ಪ್ರೀತಿಸಿದವರಿಂದ ದೂರ ಆಗಬಾರದು ಅನ್ನೋದಾದ್ರೆ, ಆಕೆ ಅವನನ್ನೇ ಮದುವೆಯಾಗಬೇಕು. ಆರೇ ತಿಂಗಳಲ್ಲಿ ವಿಧವೆ ಎಂಬ ಪಟ್ಟ ಕಟ್ಕೋಬೇಕು (ಕಟ್ಟಾ ಸಂಪ್ರದಾಯವಾದಿಗಳ ಪ್ರಕಾರ ಯೋಚಿಸಿದ್ರೆ). ಇದೆಲ್ಲಾ ಯೋಚಿಸಿ ಅವಳು ಮದುವೆ ಬೇಡ ಅಂದ್ರೆ ಅವರಿಬ್ಬರ ಪ್ರೀತಿನೇ ಸುಳ್ಳಾ? ಇಲ್ಲಾ ಪ್ರೀತಿಗಾಗಿ ಅವಳು ಮದುವೆಯಾಗಬೇಕಾ? ಮದುವೆಯಾಗಿ ಆರೇ ತಿಂಗಳಲ್ಲಿ ಒಂಟಿಯಾಗಿ ಬಾಳಬೇಕಾ? ಹಾಗಿದ್ದಿದ್ರೆ ಮದುವೆಯಾಗದೇ ಉಳಿದುಬಿಡಬಹುದಿತ್ತಲ್ವಾ?

ದಿನನಿತ್ಯ ನಾವು ಓದ್ತಾ ಇರ್ತೇವೆ, ಕೇಳ್ತಾ ಇರ್ತೇವೆ. ಮದುವೆಗೆ ಪಾಲಕರ ಅಸಮ್ಮತಿ, ಪ್ರೇಮಿಗಳ ಆತ್ಮಹತ್ಯೆ ಅಂತಾ. ಅವರು ಸಾಯೋದಕ್ಕಾಗಿಯೇ ಪ್ರೀತಿಸಿದ್ದರಾ? ಸತ್ತು ಪ್ರೀತಿಗೆ ಬೆಲೆ ತಂದರಾ? Great Stupidity! ಒಂದು ಮಾತು ಹೇಳ್ತೇನೆ. In next second ನಾನು ಸತ್ತರೆ ನನ್ನನ್ನ ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸುವ ಅಪ್ಪ–ಅಮ್ಮ ಸಾಯ್ತಾರಾ ? ನನ್ನ ಒಡಹುಟ್ಟಿದ ಅಕ್ಕ–ತಮ್ಮ ? ನನ್ನ ಪ್ರೀತಿಸೋ ಹುಡುಗಿ(ಯರು)? ಇಲ್ಲಾ ! ಮತ್ತು ಕೂಡದು!! ಈ ರೀತಿಯೆಲ್ಲಾ ಪ್ರಾಣ ಕಳ್ಕೋಳ್ಳೋಕೆ ಕಾರಣ weakmind ಮತ್ತು ಹತಾಶಭಾವನೆ. ಆ ಕ್ಷಣಕ್ಕೆ ಅವರೇ ನಮಗೆ ಪ್ರಪಂಚ ಆಗಿರ್ತಾರೆ ಮತ್ತು ಅವರಿಲ್ಲದೇ ಜೀವನ ಒಂಟಿ ಅನ್ಸುತ್ತೆ. ಆಗ ನಿಜವಾಗಲೂ ನಾವು ಯೋಚನೆ ಮಾಡಬೇಕಾದದ್ದು ನಮ್ಮ ಬಗ್ಗೆ ಹಾಗೂ ನಮ್ಮ dependents ಬಗ್ಗೆ. ಜೋತೇಲೆ ಹೊರಟುಹೋಗೋದು just matter of a second! ಸತ್ತು ಸಾಧಿಸೋದೇನಿದೆ? ಇದ್ದು ಪ್ರೀತಿಸಿದವರ / ಪ್ರೀತಿಸುತ್ತಿರುವವರ ಕನಸು ನನಸು ಮಾಡೋ ಪ್ರಯತ್ನ ಪಡಿ. ಅವರಿಗೆ ನಿಮ್ಮನ್ನು ಯಾವುದೋ ಒಂದು ರೀತಿ ನೋಡೊ ಇಷ್ಟ ಇರುತ್ತೆ. ಅದಾಗೋಕೆ ಪ್ರಯತ್ನ ಪಡಿ. Worry ಮಾಡ್ಕೋಬೇಡಿ, Be Cool ಅಂತ ಹೇಳಲ್ಲಾ ನಾನು. ಅತ್ತು ಹರಿಸಿಬಿಡಿ ಅಶ್ರುತರ್ಪಣವ, ಮನಸು ಹಗುರಾಗುವ ತನಕ. ಒಂದಾನುವೇಳೆ ಪರಿಸ್ಥಿತಿ ನಿಮ್ಮ ಪ್ರೀತಿಯನ್ನು / ಪ್ರೀತಿಸಿದವರನ್ನು ದೂರ ಮಾಡಿದ್ದರೆ ಅವರ ಒಳಿತನ್ನೇ ಎಂದೆಂದಿಗೂ ಆಶಿಸಿ. ನೀವು ಪ್ರೀತಿಸಿದವರ ನಗುವಿನಲ್ಲಿ ನಿಮ್ಮ ಖುಷಿ ಅನುಭವಿಸಿ. ಮನಸ್ಸಿಗೆ ಒಂದಿಷ್ಟು ಕನಸು ತುಂಬಿಕೊಳ್ಳಿ. ಅದನ್ನು ನನಸಾಗಿಸೋಕೆ ಪ್ರಯತ್ನಪಡಿ. ಆ ಪ್ರೀತಿಯನ್ನು

Krishnamurthy Nayak

ಒಂದಿಷ್ಟು ಒಳ್ಳೆಯ ಪುಸ್ತಕ, ಸಂಗೀತ ಹಾಗೂ ಆತ್ಮೀಯ ಗೆಳೆಯರೆಡೆಗೆ ತೆರೆದಿಡಿ. Of course, ಹೇಳಿದಷ್ಟು ಸುಲಭವಲ್ಲ ಮಾಡಿ ತೋರಿಸುವುದು. ಕದಡಿದ ನೀರು ತಿಳಿಯಾಗೋಕೆ time ತೆಗೆದುಕೊಳ್ಳುವ ಹಾಗೆ it takes time. Everything depends on how you take the matter. Remember, we are not here to live for thousands of years. Life is Very Short. Make it SWEET enogh. ಹಕ್ಕಿಗಳ ಕಲರವ, ಹರಿವ ನೀರಿನ ಜುಳು-ಜುಳು ನಾದ, ತಂಗಾಳಿಯ ಹಿತ, ಸಾಲುಗಟ್ಟಿ ಎನನ್ನೋ ಸಾಧಿಸಲು ಹೊರಟಂತಿರುವ ಇರುವೆಗಳು, ಮುಗ್ಗರಿಸಿ ಬಿದ್ದರೂ ಎದ್ದು ಮತ್ತೆ ಹೆಜ್ಜೆಯಿಕ್ಕಲು ಪ್ರಯತ್ನಿಸುವ ಮಗು , ಕಣ್ಣಂಚಿನಲ್ಲಿ ಒಸರುತ್ತಿರುವ ಎರಡು ಹನಿ ಕಣ್ಣೀರನ್ನು ಒರೆಸಿ ಮುದ್ದುಗರೆವ ಅಮ್ಮ , ಮನದ ಯಾವುದೋ ಮೂಲೆಯಲ್ಲೊಂದು ಬದುಕಿನೆಡೆಗೊಂದು ಸಣ್ಣ ಆಶಾಭಾವನೆ ಇವಿಷ್ಟೇ ಸಾಕು ನಿಮ್ಮ ಬದುಕಿಗೆ ಬಣ್ಣ ತುಂಬಲು. Don't loose your smile at any cost. ತುಟಿಯಂಚಿನ ತುಂಟ ನಗು ಎಂದೆಂದೂ ನಿಮ್ಮ ಮುಖಕ್ಕೆ ಅಂಟಿಕೊಂಡಿರಲಿ.

ನಿಮ್ಮನ್ನು ನಿಮ್ಮತನವನ್ನು ಗೌರವಿಸಿ. ಬದುಕನ್ನು ಪ್ರೀತಿಸಿ. ಅದು ನಿಮ್ಮನ್ನು ಪ್ರೀತಿಸಿ ಪೋಷಿಸುತ್ತದೆ. All The Best.

**ನಿಮ್ಮವನು**
**ಕೃಷ್ಣಮೂರ್ತಿ ನಾಯಕ**

Krishnamurthy Nayak

**© 2006** ***Copy Rights : Krishnamurthy Nayak, All Rights Reserved***
***e-mail : thatzkrish@gmail.com***

# Exuse-me! ಇದು Middle ಕ್ಲಾಸ್ ಫ್ಯಾಮಿಲಿ Matter.. .. .. ..

ನಿಜ! ತುಂಬಾನೆ ಯೋಚ್ನೆ ಮಾಡ್ತಾ ಇದ್ದೇನೆ. ಎಲ್ಲಿಂದ? ಯಾರಿಂದ? ಮತ್ತು ಹೇಗೆ? ಶುರು ಮಾಡೋದು ಅಂತಾ.ಯಾಕಂದ್ರೆ ನಾನೀಗ ಬರೆಯಹೊರಟಿರೋದು ಮನೆ–ಮನೆ ಕಥೆಯನ್ನು ! ಮುಂದಿಡುತ್ತಿರೋದು ಶ್ರೀಮಂತ ಬಡವರ ವ್ಯಥೆಯ ಕಥೆಯನ್ನು. ಶ್ರೀಮಂತ ಬಡವರು ; ಅಂದರೆ ನಮ್ಮ ಕೆಲವರಲ್ಲಿ ಬಹಳಷ್ಟು ಜನರ ಬಗ್ಗೆ – ಈಗ ಅಥವಾ ಹಿಂದೊಮ್ಮೆ ಇದ್ದ ಬಗ್ಗೆ . Middle ಕ್ಲಾಸ್ ಫ್ಯಾಮಿಲಿ ಬಗ್ಗೆ.

ಈ ಸಮಾಜದಲ್ಲಿ , ಅದರಲ್ಲೂ ನಾ ಕಂಡಿರೋ ಈ ದುನಿಯಾದಲ್ಲಿ ಆಗ ಇದ್ದದ್ದು ಕೇವಲ ಮೂರೇ ಕ್ಲಾಸ್ ಆಫ್ ಫ್ಯಾಮಿಲಿಗಳು. ಶ್ರೀಮಂತರು , ಮಧ್ಯಮ ವರ್ಗದವರು ಮತ್ತು ಬಡವರು. ಈ ಕಡೆ ಶ್ರೀಮಂತರು ಮಸ್ತ್ ಮೇಜವಾನಿಕೆಯಲ್ಲಿ ಮೆರೆದರೆ, ಬಡವರೆಂದುಕೊಂಡು ಬಡತನವನ್ನು ಬಗಲಲ್ಲಿರಿಸಿಕೊಂಡು ಬಳಲುವರೊಂದು ಕಡೆಯಾದರೆ, ಅತ್ತ ಆರಕ್ಕೂ ಏರದೆ ಮೂರಕ್ಕೂ ಇಳಿಯದೆ, ಸ್ವಾಭಿಮಾನದ ಕಿಚ್ಚು ಹಚ್ಚಿಕೊಂಡು , ನಾಚಿಕೆ–ಮರ್ಯಾದೆಯಂಬ ಮೂರಕ್ಷರದ ಪದಕ್ಕಂಜಿಕೊಂಡು, ತಿರುಗಿಯೂ ತಿರುಗದಂತಿರುವ ಕಾಲಚಕ್ರದೊಂದಿಗೆ ಉರುಳಲೆತ್ನಿಸುವ ಮಧ್ಯಮ ವರ್ಗದವರು ಇನ್ನೊಂದೆಡೆ. ಇವರು ಎಲ್ಲಾ ಇದ್ದು ಇಲ್ಲದಾದವರು. ಇಲ್ಲವಾದುದನ್ನು ಇರಿಸಿಕೊಳ್ಳುವ ತುರುಸು ಉಳ್ಳವರು. ಬಂದದ್ದರಲ್ಲಿ ಬಚ್ಚಿಟ್ಟು , ಬದಿಗಿರಿಸಿ ಬಿರುಸು ದಿನಗಳ ಎದುರು ತಡವರಿಸದಿರಲು ತಡಕಾಡುವವರು ; ಕಾರಣಗಳ ಹುಡುಕಾಡುವವರು. ಈ ಶ್ರೀಮಂತರಾದರೆ, ಬೇಕೆನಿಸಿದಷ್ಟು ಬಾಚಿ, ಬೇಡವೆನಿಸಿದ್ದ ಬಿಸುಡಬಹುದು. ಈ ಬಡವರೋ , ತಮ್ಮದೇ ಆದ ಒಂದು ಬಡತನದ Imageನಲ್ಲಿ ಕೈ ಚಾಚಿ ಬೇಡಿ ಹೊಟ್ಟೆ ತುಂಬಿಸಿಕೊಳ್ಳಬಹುದಾದವರು. ಆದರೆ? ಇತ್ತ ಬಾಚಿ ಕೊಡುವಂತಿಲ್ಲ, ಕೈ ಚಾಚಿ ಬೇಡುವಂತಿಲ್ಲ. ಇರುವುದರಲ್ಲಿ ಬೇಕಾದ ಹಾಗೆ ಬದುಕುವಂತಿಲ್ಲ. ಇದು ಮಧ್ಯಮ ವರ್ಗದವರ ಪಾಡು ; ದಿನ ನಿತ್ಯದ ಹಾಡು.

ಒಂದು ಬಾಡಿಗೆ ಮನೆ. ಆತ ಒಬ್ಬ ಸರ್ಕಾರಿ ನೌಕರ. ಆಕೆ ಗೃಹಿಣಿ. ಇಬ್ಬರು / ಮೂವರು ಮಕ್ಕಳು. ಇದೊಂದು Typical Middle Class ಫ್ಯಾಮಿಲಿಯ ಹೊರನೋಟ. ತಿಂಗಳ ಸಂಬಳ ಮನೆ ಬಾಡಿಗೆಗೆ, ಮಕ್ಕಳ ವಿದ್ಯಾಭ್ಯಾಸಕ್ಕೆ, ರೇಷನ್‌ಗೆ, ತಿಂಗಳಿಗೊಮ್ಮೆ ಬಂದು ನಿಲ್ಲೋ ಕರೆಂಟ್ ಬಿಲ್‌ಗೆ, ನಮ್ಮದೇ ಹೊದ್ದು ಮಲಗುವಷ್ಟಿರುವಾಗ

© 2006 Copy Rights : Krishnamurthy Nayak, All Rights Reserved

e-mail : thatzkrish@gmail.com
Krishnamurthy Nayak

ಬಂದು ವಾರಗಟ್ಟಲೇ ಟೆಂಟ್ ಹಾಕುವ ದೂರದ ನೆಂಟರಿಷ್ಟರ ನಂಟಿಗೆ, ತಪ್ಪದೇ ವಕ್ಕರಿಸಿ ಕೈಯಿಂದ ಕಾಸು ಕಕ್ಕಿಸುವ ಖಾಯಿಲೆಯ ಖಾಲಿ ಮಾಡಿಸಲು, ಮತ್ತಿನ್ನೆನೋ ವೆಚ್ಚಗಳಿಗೆ Tallyಯಾಗಬೇಕು. ಆಗದಿದ್ದರೂ ಆಗಿಸಬೇಕು. ಒಂದು ಸೈಕಲ್ ಬೇಕಾದರೆ ವರ್ಷ ಮುಂಚೆ ಅಮ್ಮನ ಮುಖಾಂತರ ಅಪ್ಪನಿಗೊಂದು ಅರ್ಜಿ ಸಲ್ಲಿಸುವುದು. ಅರ್ಜಿ ಫೀ ಅಂತ ಹೇಳಿ, ಮಾರ್ಕೆಟ್‌ನಿಂದ ಅಮ್ಮ ಹೇಳುವ ದಿನಿಸು /ತರಕಾರಿ ತಂದು ಕೊಟ್ಟು, ಬಾವಿಯಿಂದ ನಾಲ್ಕು ಕೊಡ ನೀರು ತುಂಬಿಕೊಡುವುದು. ಅಪ್ಪ ಬರುವ ಮುನ್ನ ಅಮ್ಮನ ಕಿವಿ ಕಚ್ಚಿ, ಬಾಗಿಲ ಹಿಂದೆ ನಿಂತು ಅಮ್ಮನಿಗೆ ವಿಷಯ ವರದಿಸಲು ಸನ್ನೆ ಮಾಡುವುದು. ಒಂದೊಮ್ಮೆ ಅಪ್ಪನೋ ಒಂದೊಳ್ಳೆ Moodನಲ್ಲಿ ಇದ್ದು , Yes ಅಂದುಬಿಟ್ಟರೆ ನಿಂತ ಜಾಗದಲ್ಲೇ ಕುಣಿದು ಕುಪ್ಪಳಿಸುವುದು. ಹಬ್ಬಕ್ಕೆ ಅಂತ ಒಂದು ಹೊಸ ಬನಿಯನ್ನು ಮತ್ತು ಚಡ್ಡಿ ತಂದು ಹಾಕಿ ಸಂಭ್ರಮಿಸುವುದು. ಅಮ್ಮ ಹೇಳಿದೊಡನೆ , ರದ್ದಿ ಪೇಪರ್‌ಗಳ ಗಂಟು ಕಟ್ಟಿ ಸೈಕಲ್‌ಗೇರಿಸಿ ಅಂಗಡಿಗೆ ಕೊಟ್ಟು ಬಂದರೆ 5 ರೂಪಾಯಿ Tips ಬೇರೆ. ಪೇಟೆಗೆ ಹೋಗಿ ಬಂದಾಗಲೆಲ್ಲ ಅಮ್ಮ ಚಾಕೋಲೆಟಿಗಂತ ಕೊಟ್ಟ ಚಿಲ್ಲರೆ ಪುಡಿಗಾಸೆಲ್ಲ ಒಟ್ಟು ಹಾಕಿ "ಮಡಕೆ ಹುಂಡಿ" ಬ್ಯಾಂಕ್‌ನಲ್ಲಿಟ್ಟು , ಒಮ್ಮೆಲೇ ಅಮ್ಮನ ಮುಂದೆ ಅವಶ್ಯಕತೆ ಬಿದ್ದಾಗ ತೆಗೆದು ಕೊಟ್ಟರೆ ಏನೋ ಸಹಾಯ ಮಾಡಿದೆನೆಂಬ ಹೆಮ್ಮೆ. ಜೊತೆಗೆ ಅಮ್ಮನ ಒಂದು ಪ್ರೀತಿಯ ಮುತ್ತು plus ಒಂದು ಕೈತುತ್ತು. Coffee Bite ಮತ್ತು ಆಸೆ ಚಾಕೋಲೇಟ್‌ಗಳೇ ಅವತ್ತಿಗೆ ನಮ್ಮ ಪಾಲಿನ Dairy Milk , ಮಂಚು , ಕ್ರಂಚು ಎಲ್ಲಾ! ಕ್ಲಾಸಿಗೆ ಪರೀಕ್ಷೆಯಲ್ಲಿ First ಬಂದ ಕಾರಣಕ್ಕೆ ಕೊಟ್ಟ 75 ರೂಪಾಯಿ ಸ್ಕಾಲರ್‌ಶಿಪ್ ಹಣ, ಅಪ್ಪಿ ತಪ್ಪಿ ಮಾವ ಮನೆಗೆ ಬಂದಾಗ ಕೊಟ್ಟ 50 ರೂಪಾಯಿ ನೋಟು, ಅದನ್ನು ಅಮ್ಮನ ಕೈಗಿತ್ತ ಸಂಭ್ರಮ ಇನ್ನೆನೋ?! ಒಂದಾನುವೇಳೆ ಶಾಲೆಗೆ ಹೋಗುವ ವೇಳೆಯಲ್ಲಿ ಅಂಗಿಯ ಗುಂಡಿ ಕಿತ್ತು ಹೋದದ್ದು ಗೊತ್ತಾದರೆ , ಅಪ್ಪ ಅಮ್ಮನಿಗೆ ಬಯ್ಯುವರೆಂಬ ಕಾರಣಕ್ಕೆ ಗೊತ್ತಾಗದಂತೆ safety ಪಿನ್ನು ಸಿಕ್ಕಿಸುವ ಅಕ್ಕ. ಆರ್ಭಟಿಸಿ ಸುರಿವ ಮಳೆಗೆದುರಾಗಿ ಹಿಡಿದು ತಿರುಗಲುಬೇಕಾದ ಕೊಡೆ (ಛತ್ರಿ)ಯ ಮುರಿದ ಕಡ್ಡಿಗೊಂದು ಗುಂಡುಪಿನ್ನು ಚುಚ್ಚಿ ನೆತ್ತಿ ನೆನೆಸಿದರಲೊಂದು ಯತ್ನ. ಪಿಳಿ ಪಿಳಿ ಕಣ್ಣು ಬಿಟ್ಟುಕೊಂಡು ಡಿಶುಂ ಡಿಶುಂ ಸಿನೆಮಾ ನೋಡುತ್ತಿರುವಾಗ ಟಿವಿ ಹೀಟ್ ಆಯಿತೆಂದು TV ಆಫ್ ಮಾಡುವ ಪಕ್ಕದ ಮನೆಯವರು ; ಹಾಗಂದರೇನೆಂದು ತಿಳಿಯದೆ ಇದ್ದರೂ ಕಂಡ ದೃಶ್ಯಗಳನ್ನೇ ಮೆಲುಕು ಹಾಕುತ್ತಾ ಮನೆಯತ್ತ ಮರಳಿ ಹೆಜ್ಜೆಯಿಕ್ಕುತ್ತಿದ್ದ ನಾನು ಮತ್ತು ನನ್ನ ತಮ್ಮ ಇತ್ಯಾದಿ ಇತ್ಯಾದಿ. ಸರಿಸುಮಾರು 12–15 ವರ್ಷಗಳ ಹಿಂದಿನ Flashbak!!!

ನಿಜ! ಕಾಲ ಬದಲಾಗಿದೆ. ಜನ ಬದಲಾಗಿದ್ದಾರೆ ಅಂತ ಹೇಳ್ತಾರೆ. ಆದರೆ ನಮ್ಮ ಅವಶ್ಯಕತೆಗಳು ಕೂಡ ತಮ್ಮ ರೂಪ ಬದಲಿಸಿಕೊಂಡಿವೆ. ಆ ಬಣ್ಣದ ಪೆಟ್ಟಿಗೆ (ಟಿವಿ), ಫ್ರಿಡ್ಜು, ಟೆಲಿಫೋನು, ವಾಷಿಂಗ್ ಮಷಿನ್ ಮತ್ತುಳಿದವೆಲ್ಲವೂ ತಮ್ಮ Royalty ಕಳೆದುಕೊಂಡು ದಿನನಿತ್ಯದ ಜೀವನದಲ್ಲಿ ಅವಶ್ಯಕ ಪರಿಕರಗಳಾಗಿ ಮಾರ್ಪಟ್ಟಿವೆ. ನೂರು–ಸಾವಿರದಲ್ಲಿ ಮಾತಾಡುತ್ತಿದ್ದ ಜನ ಲಕ್ಷ–ಕೋಟಿ ಎನ್ನುತ್ತಿದ್ದಾರೆ. Yes! Money has lost its value. Of Course , it has to. ನನ್ನ ಆ ದುನಿಯಾದಲ್ಲಿ ಇದ್ದ ಮೂರು ಕ್ಲಾಸ್ ಆಫ್ ಫ್ಯಾಮಿಲಿಗಳು ಈಗ ನಾಲ್ಕಾಗಿವೆ. ಹೌದು ! ಬಡವರಲ್ಲಿ ಕೆಲವರು ಮಿಡಿಯಮ್ ಕ್ಲಾಸ್‌ಗೆ ಪ್ರಮೋಷನ್ ಪಡೆದಿದ್ದರೆ , ಆ ಮಧ್ಯಮ ವರ್ಗ ಮತ್ತು ಶ್ರೀಮಂತ ವರ್ಗದ ಮಧ್ಯೆ

© 2006 Copy Rights : Krishnamurthy Nayak, All Rights Reserved

e-mail : thatzkrish@gmail.com

ಮತ್ತೊಂದರ ಎಂಟ್ರಿಯಾಗಿದೆ. ಅದೇ Upper Medium ಕ್ಲಾಸ್ (ಮೇಲ್‌ಮಧ್ಯಮ ವರ್ಗ!). ಅಂದಿನ Medium ಕ್ಲಾಸ್ ಜನರಾದ ನಾವು ಈಗಲೂ ಮೀಡಿಯಮ್ಮೇ. ಆದರೆ Upper !. ಅಂದು ಅಬ್ಬಾ! ಎಂದು ಕಣ್ಣು ಬಿಟ್ಟು ನೋಡುತ್ತಿದ್ದ Maruti 800 ಇಂದು ನಮಗೆ ಪುಟಗೋಶಿ! ಈಗೇನಿದ್ದರೂ ದೃಷ್ಟಿ Innova ದಂತಹ ಗಾಡಿಗಳ ಮೇಲೆಯೇ. ಅಂದು ಪ್ಯಾನ್ ಗಾಳಿಗೆ ಮೈಯೊಡ್ಡಲು ತವಕಿಸುತ್ತಿದ್ದ ನಾವೀಗ ನೇರ ಹೊಕ್ಕು ಕೂಡುವುದು AC ಹೋಟೆಲ್‌ನಲ್ಲೇ! ಹತ್ತು ಸಿನೆಮಾಗಳ ಬದಲು ಒಂದಾದರೂ ನೋಡಬೇಕೆನಿಸುವುದು PVR ಇಲ್ಲಾ Inox ನಲ್ಲೇ! ಮೊನ್ನೆ ಮೊನ್ನೆವರೆಗೂ ಊರಲ್ಲಿ ಎಕರೆಗಟ್ಟಲೇ ಜಾಗ ಖರೀದಿಸಬೇಕೆನ್ನುತ್ತಿದ್ದ ನಮ್ಮ ಮನಸ್ಸು ದೃಷ್ಟಿ ನೆಟ್ಟಿರುವುದು , ಯಾವುದಾದರೂ ಮಹಾನಗರದಲ್ಲಿನ 30X40 ಸೈಟ್ ಮೇಲೆ. ಅಂದು ಅಪ್ಪನೊಬ್ಬ ದುಡಿಯುತ್ತಿದ್ದ ಕಾಲವೆಲ್ಲಿ? ಮನೆಯ ನಾಲ್ಕು ಜನ ದುಡಿಯುತ್ತಿರುವ ಈ ಕಾಲವೆಲ್ಲಿ? ಆದರೆ, ಅಂದು ನಾವೆಲ್ಲಾ ಒಟ್ಟಾಗಿ ಆಚರಿಸಿ ಸಂಭ್ರಮಿಸುತ್ತಿದ್ದ ಹಬ್ಬ-ಹರಿದಿನಗಳೆಲ್ಲಾ ಈಗ ಬರಿ ಕನಸುಗಳು. ಒಂದೊಮ್ಮೆ ಎಲ್ಲಾ ಸೇರಿದರೂ , ಹಬ್ಬಕ್ಕೆ ಅಂದಿನ ಕಳೆ-ಮೆರುಗು ತರಲಾಗುತ್ತಿಲ್ಲ. ಕಾರಣ ನಮ್ಮಲ್ಲಿ ನಾವಿಲ್ಲ. ನಾವು ಕಳೆದುಹೋಗಿದ್ದೇವೆ. ಕಳೆದು ಹೋಗಬೇಕಾಗಿದೆ. ಇಲ್ಲವೆಂದರೆ ನಾಗಾಲೋಟದಲ್ಲಿ ಸಾಗುತ್ತಿರುವ ಈ ಪ್ರಪಂಚವನ್ನು ಬೆಂಬತ್ತಿ ಹೋಗುವುದಾದರೂ ಹೇಗೆ ಸಾಧ್ಯ? ನಿನ್ನೆ ಇದ್ದಂತೆ ಇವತ್ತಿಲ್ಲ. ನಾಳೆ ಗೊತ್ತಿಲ್ಲ? ಒಂದರ್ಥದಲ್ಲಿ ದಿಕ್ಕು ತೋಚದಂತಾಗಿ ಹೋಗಿದ್ದೇವೆ ನಾವು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕಣದಲ್ಲಿ ಉಳಿಯಬೇಕೆಂದರೆ ಆ ಖುಷಿ-ವಿಶ್ರಾಂತಿ ಇವೆಲ್ಲಾ ತೊರೆಯಬೇಕಾದ ಅನಿವಾರ್ಯತೆ. ಈ ಪಯಣ ಎಲ್ಲಿಗೆ ಸಾಗುವುದೋ ಎಂಬ ಆತಂಕ ಕಾಡಿ ಯೋಚಿಸುತ್ತಾ ಕುಳಿತುಬಿಟ್ಟರೆ, ಅದು ಉಹಿಸಲಾಗದಷ್ಟು ದೂರ ಸಾಗಿ ಬಿಟ್ಟಿರುತ್ತದೆ. ಕುಛ್ ಪಾನೆ ಕೇಲಿಯೆ ಕುಛ್ ಕೋನಾ ಪಡ್ತಾ ಹೈ . ಆದರೆ ಕಳೆದುಕೊಂಡಿದ್ದರ ಬಗ್ಗೆ ಯೋಚಿಸುತ್ತಾ ಕೂತರೆ ಪಡೆದಿದ್ದನ್ನು , ಪಡೆಯಬೇಕಾದ್ದನ್ನು ಕಾಣದಂತಾಗಬಹುದು. ತಮಾಷೆಯೆಂದರೆ ಮತ್ತದೇ ಬೇಕು-ಬೇಡಗಳ ಪ್ರಶ್ನೆ. ಬದುಕಿಗೊಂದು ನಮ್ಮದೇ ಸಾರ್ಥಕತೆಯ ಗರಿ ಸಿಕ್ಕಿಸುವ ಗುರಿ. ನಮ್ಮ ಭವಿಷ್ಯದ ಕತ್ತು ನಾವೇ! ಚಾರ್ಲ್ಸ್ ಡಾರ್ವಿನ್‌ನ "Struggle for Existance and Survival of Fittest" ಸಿದ್ಧಾಂತ, ನಮ್ಮೆಲ್ಲರ ಪಾಲಿಗಿಂದು ವೇದವಾಕ್ಯ. ನಾವೇನಾಗಬೇಕು? ಹಾಗಾಗಬೇಕೆಂದರೆ ಏನೇನು ಬದಲಾವಣೆಯಾಗಬೇಕು? ಅದಕ್ಕೆ ಎಷ್ಟು ಶ್ರಮಪಡಬೇಕು? Medium ನಿಂದ Upper Mediumಗೇರಿರುವ ನಮ್ಮ ಮುಂದಿನ destiny ಯಾವುದು? ಯಾವುದಾಗಿಸಬಹುದು? "ಪರಿವರ್ತನೆ ಜಗದ ನಿಯಮ". ಯೋಚಿಸಿ. All the Best.

**ನಿಮ್ಮವನು**
**ಕೃಷ್ಣಮೂರ್ತಿ ನಾಯಕ**

Krishnamurthy Nayak

© 2006 *Copy Rights : Krishnamurthy Nayak, All Rights Reserved*

*e-mail : thatzkrish@gmail.com*

# ಕೊಂದು ಬಿಟ್ಟೆಯಲ್ಲಾ ಹುಡುಗಿ ನನ್ನ ಸುಮ್ಮ ಸುಮ್ಮನೆ .. .. .. .. !!!!!

ಏ ಹುಡುಗಿ ! ಏನಾಯ್ತು ನಿನಗೆ ? ಹೇಗಾಯ್ತು ಹೀಗೆ? ಏನೀ ಬಗೆ? ನಡೆದದ್ದು ಬರಿ ಸೋಗೆ? ಮುಂದೆ ಹೇಗೆ? ಮನಸಲ್ಲಿ ಇತ್ಯಾದಿ ಇತ್ಯಾದಿ ಪ್ರಶ್ನೆಗಳ ಲಗ್ಗೆ. ಕಳೆದ ಎಲ್ಲಾ ದಿನಗಳಂತೆ ಅಲ್ಲಾ ಇಂದು. Yes! ಮನಸು, ಈ ಪುಟ್ಟ ಹೃದಯ ಮತ್ತು ನಾನು (ನನ್ನತನ) Fully Stirred ; Not Shaken. ಮನಸಾದ್ರೂ ಹೇಗೆ ಬಂತೆ ನಿನಗೆ? ಛೇ! ಸಾರಿ. ಮನಸಿದೆಯಾ ನಿನಗೆ? ಉಹ್ಹುಂ. ಮನಸಿಲ್ಲದಿದರೆ ನಿನಗೆ, ಈ ಇನಿಯನ ಕನಸಿಗೆ ನೀರೆರಿದಿದ್ದೆ ಹೇಗೆ? "ನೀ ನನ್ನ ಪ್ರಾಣ ಕಣೋ" ಅಂದ ನನ್ನ ಪಾಲಿನ ಅದೃಷ್ಟ (Lucky) ಲಕ್ಷ್ಮಿ ಅದೃಶ್ಯಳಾದಳೇ ನನ್ನ ಪಾಲಿಗೆ? ಉತ್ತರವಿಲ್ಲದ , ಉತ್ತರಿಸಲಾಗದ , ಕುಳಿತಲ್ಲೇ ತತ್ತರಿಸಿ ಹೋಗಿ ದುಃಖ ಉಮ್ಮಳಿಸಿ ನರಳಿಸುವ ಈ ಪ್ರಶ್ನೆಗಳಷ್ಟೇ ಇನ್ನು ನನ್ನ ಪಾಲಿನ ನೆನಪಿಗೆ, ನೆಪಕ್ಕೆ!?

ಬದುಕು ಒಂದು ಹುಡುಕಾಟ. ಕಲಿತರೂ ಮುಗಿಯದ ವಿದ್ಯೆಗಾಗಿ; ಪಡೆದರೂ ಪರಿತಪಿಸುವ ಪ್ರೀತಿಗಾಗಿ ; ಸಿಕ್ಕೂ ಸಿಗದಂತಹ ತೃಪ್ತಿಗಾಗಿ. ಜೀವನದಲ್ಲಿ ಕಳೆದುಕೊಳ್ಳೋದು ಇದ್ದರೆ ಓಕೆ. ಕಳೆದುಕೊಳ್ಳೋದೆ ಜೀವನ ಅಂತಾದರೆ? ಈ ಜೀವನಾನೆ ಇಷ್ಟು. ನಡೆದು ಸಾಗುತ್ತಿರುವ ದಾರಿ ಬಿಸಿಲೊಡೆದು ಕವಲುದಾರಿಯಾಗುತ್ತದೆ. ಆ ಹೊತ್ತಿಗೆ ನೆತ್ತಿಗೆ ತೋಚಿದ್ದನ್ನು ಹೌದೆಂದುಕೊಂಡು , ಒಂದೆಡೆ ಮುಖ ತಿರುಗುಸಿ ಹೊರಟುಬಿಟ್ಟಿರುತ್ತೇವೆ. ಮೊದಲೊಂದಿಷ್ಟು ಹೆಜ್ಜೆ ಸಾಗುವಾಗ ನಿರಾತಂಕ. ಯಾಕಂದ್ರೆ ತೋಚಿದ್ದು ತೋಪೆದ್ದು ಹೋಗೊ ಆ ಕಾಲ ಬಂದು ವಕ್ಕರಿಸಿರಲ್ಲ. ಇಷ್ಟ ಪಟ್ಟು ಕಟ್ಟಿಕೊಂಡ ಬದುಕು , ಕಂಡುಕೊಂಡ ದಾರಿ ಕಷ್ಟವೆನಿಸಲು ಶುರುವಾಗುತ್ತೆ. ಎಲ್ಲಾರಿಗೂ ಎಲ್ಲಾ ದಾರಿಲೂ ಹೀಗಾಗೋಕೆ ಸಾಧ್ಯ ಇಲ್ಲ. ಯಾಕಂದ್ರೆ ಒಬ್ಬರಂತೊಬ್ಬರಲ್ಲವಲ್ಲ ನಾವು.

ನಾವು ಪಡೆದುಕೊಂಡು ಬಂದದ್ದೇ ಇಷ್ಟು ಎಂದುಕೊಂಡು , ತಮ್ಮ ಹೆಗಲು ತಾವು ತಟ್ಟಿಕೊಂಡು ಮುಂದೆ ಸಾಗುವವರು ಕೆಲವರು. ಮುಂದೆ ಸಾಗಲಾರದೇ, ಬಂದ ದಾರಿ ಮುಚ್ಚಿ ಹೋಗಿ ಕೊಚ್ಚಿ ಹೋಗುವವರು ಹಲವರು. ಪ್ರೀತಿಸಿ ಪಡೆದುದನ್ನು ಬಾಳಮಾಲೆಗೆ ಪೋಣಿಸಿಕೊಂಡು, ಕಂಡ ಕನಸನ್ನು ನೆನಸು ಮಾಡುವ ಹುರುಪು ತುಂಬಿಕೊಂಡು, ಒಂದು chance ತೆಗೆದುಕೊಂಡು, ಮುಂದಿನ ಕವಲುದಾರಿಯನ್ನು ಅರಸುತ್ತಾ ಅವಡುಗಚ್ಚಿ ಸಾಗುವವರು ಮತ್ತುಳಿದವರು. ನೋಡಿ! ಬರೆಯಬೇಕಿದ್ದ, ಬರೆಯಬೇಕೆಂದುಕೊಂಡ ವಿಷಯಾನೇ ಹೇಗೆ ತನ್ನ ದಾರಿ ಎತ್ತೆತ್ತಲೋ ಬದಲಿಸಿಕೊಳ್ಳುತ್ತಿದೆ. ಬರೆದುದನ್ನು ಒಂದರೆಕ್ಷಣ ತಿರುಗಿಸಿ ಓದಿ ಒರೆಸಬಹುದು. ಆದರೆ ನಡೆದ ದಾರಿ, ಕಳೆದ ಕ್ಷಣ , ಕೊಟ್ಟು ಪಡೆದ ಪ್ರೀತಿ???

Krishnamurthy Nayak

ಬದುಕಿಗೊಂದಿಷ್ಟು ಕನಸು, ಅದನ್ನು ನೆನಸು ಮಾಡಲೊಂದಿಷ್ಟು ಪ್ರಯತ್ನ, ಇವೆರಡಕ್ಕೂ ಒಂದು ಗೊತ್ತು ಗುರಿ. ಇದು ಹಿಂದೊಮ್ಮೆ ನನ್ನ ಬದುಕಿಗೆ ಇದ್ದ ಒಂದೇ ಒಂದು ಮುಖ. ಚಿಕ್ಕ ಚಿಕ್ಕ target ಗಳನ್ನಿಟ್ಟು ಚೊಕ್ಕ ಪ್ರಯತ್ನವಿರಿಸಿ ಪಕ್ಕಾ ಪ್ರತಿಫಲ ಪಡೆಯುತ್ತಿದ್ದ ನನ್ನಲ್ಲಿನ ಅವನು ! ಅವನೇ ಬೇರೆ. ಅವನ ಬದುಕಿನ ಸ್ಟೈಲೇ ಬೇರೆ. ಅಂದುಕೊಂಡಿದ್ದು ಹೌದಾದರೆ ಅದು ಬಂದು ಅನವ ಮುಂದೆ ನಿಲ್ಲಲೇಬೇಕಿತ್ತು ಆತನ ಎದಿರು. ತನ್ನದೇ ಒಂದು ಜಗತ್ತು. ಆ ಜಗತ್ತಲ್ಲಿ ತನ್ನದೇ ಆದ ಬದುಕು, ಅವನೇ ಏಕಚಕ್ರಾಧಿಪತಿ ಅಲ್ಲಿ. ಆ ಛಲದಂಕಮಲ್ಲನಲ್ಲಿ ಮತ್ತಷ್ಟು ಬಲ ತುಂಬುತ್ತಿದ್ದುದು, ಅವನ ಸಾಮರ್ಥ್ಯದ ಬಗ್ಗೆ ಉಳಿದವರಲ್ಲಿದ್ದ ಆ extra ನಂಬಿಕೆ.

ಹೌದು ! ಈ ಹಿಂದೆ ಹೇಳಿದ ಬದುಕಿನ ರೀತಿನೇ ಬುಡಮೇಲು ಮಾಡಿ ಅಟ್ಟಹಾಸದ ನಗೆ ಬೀರೋ ಆ ಕರಾಬ್ ಟೈಮ್ ಬಂದು ವಕ್ಕರಿಸಿತ್ತು. ಮನದ ಕನಸೆಲ್ಲಾ ಮಣ್ಣು ಮಾಡಲೆಂದೇ "ಅವಳು" ಅರ್ಥಾತ್ ಆ "ಬೆಳದಿಂಗಳ ಬಾಲೆ" ಕಣ್ಣಲ್ಲಿ ಮನೆ ಮಾಡಿದ್ದಳು. ಒಬ್ಬ ಮುಗ್ಧ, ಅಮಾಯಕ ಹುಡುಗನೊಬ್ಬ ಗೊತ್ತಿಲ್ಲದ ಯಾವುದೋ ಒಂದು ಮಾಯೆಗೆ ಪರವಶನಾಗಿದ್ದ. "ಹೆಣ್ಣು ಮಾಯೆಯಲ್ಲ ; ಹೊನ್ನು ಮಾಯೆಯಲ್ಲ ; ಮನಸು ಮಾಯೆ" ಅಂತಾರೆ ಬಹಳ ಜನ. ನಿಜ ಕಣ್ರಿ ! ಮನಸು ಮಾಯೆ. ಯಾವಾಗ ಅಂದ್ರೆ ಈಗಾಗಲೇ ಹೇಳಿದ ಈ ಮೂರರಲ್ಲಿ ಒಂದರ ಛಾಯೆ ಅದರಲ್ಲಿ ಮೂಡಿದಾಗ.

ಈ ಹುಚ್ಚು ಮನಸು ಹೇಗೆ ಅಂದ್ರೆ ಅಂದುಕೊಂಡಿದ್ದನ್ನ ಪಡೀಬೇಕು ಅಂದುಕೊಳ್ಳುತ್ತೆ. ಅಂದುಕೊಂಡಿದ್ದು ಸಿಗದೆ ಹೋದಾಗ ಅಥವಾ "That was not our cup of coffee" ಅನ್ನಿಸಿದಾಗ ಕಳೆದುದರ / ತೊರೆದುದರ ಎರಡರಷ್ಟನ್ನ ಅರಸುತ್ತಾ ಸುತ್ತುತ್ತೆ. ಯಾರಾದ್ರೂ I'm Happy Leaving ಅಂತ ಅಂದ್ರೆ ಅವನ ಹುಡುಕಾಟ ಮುಗಿದಿದೆ ಅಂತಲ್ಲ. ಸುತ್ತಿ ಸುತ್ತಿ ಸುಸ್ತಾಗಿ "ಪಾಲಿಗೆ ಬಂದದ್ದು ಪಂಚಾಮೃತ" ಅಂದುಕೊಂಡು ಬೋರ್‌ವೆಲ್ ನೀರಿಗೆ ಗ್ಲುಕೋಸ್ ಹಾಕ್ಕೊಂಡು ಹೀರ್ತಾ ಬದುಕ್ತಾರೆ. ಬಹಳಷ್ಟು ಜನ ಮಾಡೋದೆ ಹೀಗೆ. ಇನ್ನು ನನ್ನಂತವರು, ಇಲ್ಲಾ ! ನನ್ನದೇ ಆದ ಒಂದು ಬದುಕಿದೆ. ಆ ಬದುಕಿಗೆ ಅರ್ಥತುಂಬೋ ಒಂದು ಮನಸಿದೆ ಅಂದುಕೊಂಡು ಹುಡುಕಾಟ ಮುಂದುವರಿಸ್ತಾರೆ. ಅದರ ಕೊನೆ ಅಧ್ಯಾಯಾನೇ ನೀನು, ನಿನ್ನಲ್ಲಿನ ಅವಳು ಕಣೇ!!!.

ನೊಂದ ಮನಸಿಗೆ ಅಷ್ಟೊತ್ತಿನ ಸಮಾಧಾನ ಸಿಕ್ರೂ ಸಾಕನ್ನಿಸಿಬಿಟ್ಟಿರುತ್ತೆ. ಹಿಡಿದು ನಡಿತಾ ಇದ್ದ ಆ "ಪ್ರಿಯತಮೆ" ಯ ಕೈ ಬದಲು ನಮ್ಮ ಮಲ್ಯಣ್ಣನ KF ಬೀರು ಬಂದುಬಿಟ್ಟಿರುತ್ತದೆ. ಆ ಚುಂಬನಕ್ಕೆ ಹಾತೊರಿತಾ ಇದ್ದ ತುಟಿಗಳ ಮಧ್ಯೆ ಹತ್ತಿಕೊಂಡಿರೋ ITC ಕಿಂಗ್ ಸಿಗರೇಟು !. ಒಂದೆರಡು ಧಮ್ ಹೊಡೆದು , ಸಣ್ಣಗೆ "ಓ ಮನಸೇ ರಿಲ್ಯಾಕ್ಸ್ , ಪ್ಲೀಸ್" ಅಂದುಕೊಳ್ತಾ ಸ್ಕೂಟಿ ಮೇಲೆ Smile ಕೊಟ್ಟು ಹೋದ ಆ ಜೀನ್ಸ್ ತೊಟ್ಟ ಹುಡುಗಿಯ ನಗುವಿನಲ್ಲಿ ನನ್ನವಳ ನಗೆಯ ಕಲ್ಪಿಸಿಕೊಂಡು ಸಣ್ಣಗೆ ಮಂದಹಾಸ ಬೀರೋ ನಮ್ಮಲ್ಲಿನ ಆ ತುಂಟು ಹುಡುಗುತನ.

Krishnamurthy Nayak

"ಅವಳು" ಅನ್ನೋ ಆ ಸ್ಥಾನಕ್ಕೆ ಬರಲೆತ್ನಿಸಿದವರೆಷ್ಟೋ? ಬರಿಸಿಕೊಂಡವರೆಷ್ಟೋ? ಬಂದವರೆಷ್ಟೋ? ಮತ್ತೆ ಬರಲಿರುವವರೆಷ್ಟೋ???. ಆ ಅವಳಿಂದ ಶುರುವಾಗಿ ಅವಳಲ್ಲಿನ ನಿನ್ನವರೆಗೆ ಅನ್ನಿಸಿದ್ದು ಒಂದೇ.ಅದು ಅವಳಲ್ಲಿನ ಇವಳೇ ಕೊನೆ ಎಂದು. ಇವಳೇ ಅವಳೆಂದು. ಕಾಲದ ಮಾಯೆಯೋ, ಇಲ್ಲಾ ಅನಿವಾರ್ಯತೆಯೊಳಗಿನ ಅವಶ್ಯಕತೆಯೆಂಬ ಅಸಹಾಯಕತೆಯ ಕಥೆಯ ಕಂತೆಯೋ ಇವಳಲ್ಲಿನ ಯಾರೂ ಅವಳಾಗಲಿಲ್ಲ. ಅವಳಾಗಬಂದವರೆಲ್ಲ ಇವಳಾಗಿ ತೆವಳಿ ಹೋದರು. ಅವಳಿಗಾಗಿ ಈ ಬರಡು ಹೃದಯದಲ್ಲಿ ಮೊಳೆತ ಪ್ರೀತಿ, ಅವಳಿಂದಾಗಿ ಮರೆತ ಬದುಕಿನ ರೀತಿ ಮತ್ತೆ ಮತ್ತೆ ಚಿಗುರಿ ಅಮೃತ ಸಿಂಚನವನ್ನುಣಬಡಿಸುತ್ತಿದ್ದುದು, ಅವಳಲ್ಲಿ ಅವಳಾಗಹೊರಟವರಿಂದಾಗಿ.

ಅವಳಲ್ಲಿ ಅವಳಾಗಿ ಹೋಗಲು ಬಂದ / ಬರಿಸಿಕೊಂಡ ಇವಳು ಅವಳಾಗದಿದ್ದಾಗ / ಅವಳಾಗಿಸಿಕೊಳ್ಳದಿದ್ದಾಗ ಮತ್ತೊಮ್ಮೆ ಮರಳಿ ಇವಳ ಅವಳಾಗಿಸುವ ಯತ್ನ. ಜೊತೆಗೆ ಹೊರಳಿ " ಮರಳಿ ಯತ್ನವ ಮಾಡು " ಎಂದು ತಿಳಿದೂ ತಿಳಿಯದಂತೆ ತಿಳಿ ಹೇಳುವಾಗ , ಮನಸು ಉಲಿಯುತ್ತಿದ್ದುದು ಒಂದೇ ಮಾತು ; ಅದೇ " **ಕೊಂದು ಬಿಟ್ಟೆಯಲ್ಲಾ ಹುಡುಗಿ ನನ್ನ ಸುಮ್ಮ ಸುಮ್ಮನೆ** . . . . . "

**ನಿಮ್ಮವನು**
**ಕೃಷ್ಣಮೂರ್ತಿ ನಾಯಕ**

Krishnamurthy Nayak

© 2006 *Copy Rights : Krishnamurthy Nayak, All Rights Reserved*
*e-mail : thatzkrish@gmail.com*